ಇ) ಉದ್ಭವಿಸುವುದಿಲ್ಲ.

166(379): ಶ್ರೀ ಕೃಷ್ಣಮೂರ್ತಿ ಕೆ.ಎಂ.

ವಿಷಯ: ಅಲೆಮಾರಿ ಜನಾಂಗದವರನ್ನು ಪ್ರವರ್ಗ–1 ರಿಂದ ಬೇರ್ಪಡಿಸಿ ರುವುದು.

ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಅಲೆಮಾರಿ ಜನಾಂಗದವರನ್ನು ರವರ್ಗ–1 ರಿಂದ ಪ್ರತ್ಯೇಕಗೊಳಿಸಿ ಕೇಂದ್ರ ಸರ್ಕಾರದ ಆರ್ಥಿಕ ನೆರವಿನಿಂದ ಮುಖ್ಯವಾಹಿನಿಗೆ ತರಲು ಕ್ರಮ ಕೈಗೊಳ್ಳಲಾಗುವುದೇ?

ಆ) ಈ ಬಗ್ಗೆ ಹಿಂದುಳಿದ ವರ್ಗಗಳ ಆಯೋಗವು 2005 ರಲ್ಲಿ ಸಲ್ಲಿಸಿರುವ ವರದಿಯ ಬಗ್ಗೆ ಸರ್ಕಾರ ಯಾವುದೇ ಕ್ರಮ ಕೈಗೊಳ್ಳದಿರುವುದು ನಿಜವೇ?

ಇ) ಸರ್ಕಾರವು ಈ ವರದಿಯನ್ನು ಯಥಾವತ್ತಾಗಿ ಜಾರಿಗೊಳಿಸಿ, ಸಾಮಾಜಿಕ ಬದ್ದತೆಯ ಕಳಕಳಿಯಿಂದ ಪ್ರವರ್ಗ–1 ಮತ್ತು 2 ರಲ್ಲಿ ತೀರ »AzÀ¸ÀzÀeÁwUÀ¼ÀUÉ.¸ÀA¢gÀÀDzÀ±ÀDCA(CSC) 05/2007, ದಿನಾಂಕ 25.06.2007 "ಒಳ ಮೀಸಲಾತಿ ಉಪ ಸಮಿತಿಯ ತಂದು" ಸಂವಿದಾನ ಅನುಚ್ಛೇದ 15(4) ಮತ್ತು 16(4) ರ ಮೀಸಲಾತಿ ಸೌಲಭ್ಯ ಕಲ್ಪಿಸಲಾಗುವುದೇ?

ಶ್ರೀ ಬಾಲಚಂದ್ರ ಜಾರಕಿಹೊಳಿ

ಅ) ಅಲೆಮಾರಿ ಜನಾಂಗವು ಪ್ರಸ್ತುತ ಪ್ರಬರ್ಗ–1 ರಲ್ಲಿ ಸೇರಿದ್ದು ಪ್ರವರ್ಗ –1 ರಲ್ಲಿರುವ ಜನಾಂಗದವರಿಗೆ ಶೇಕಡಾ 4 ರಷ್ಟು ಮಿಸಲಾತಿಯನ್ನು ಕಲ್ಪಿಸಲಾಗಿದೆ. ಅಲೆಮಾರಿ ಜನಾಂಗದವರನ್ನು ಪ್ರವರ್ಗ–1 ರಿಂದ ಬೇರ್ಪಡಿಸುವ ಕುರಿತು ಹಿಂದುಳಿದ ವರ್ಗಗಳ ಶಾಶ್ವತ ಆಯೋಗವು ವರದಿ ನೀಡಿದ ನಂತರ ಪರಿಶೀಲಿಸಲಾಗುವುದು.

ಆ) ವರದಿ ಜಾರಿಗೊಳಿಸುವ ವಿಷಯ ಪರಿಶೀಲನೆಯಲ್ಲಿದೆ.

ಇ) ಉದ್ಭವಿಸುವುದಿಲ್ಲ.

167(239) ಶ್ರೀ ಬಾಲಾಜಿ ಆರ್ ಮೆಂಡನ್

ವಿಷಯ: ಜಾತಿವಾರು

ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿ ಒಟ್ಟು ಜಾತಿಗಳೆಷ್ಟು? (ವಿವರ ನೀಡುವುದು)

ಆ) ಮೀನುಗಾರಿಕೆ ನಡೆಸುವ ಜಾತಿಗಳಾವುವು?

ಇ) ಮೊಗವೀರ ಜಾತಿಗೆ ಸೇರಿರುವ ಉಪ ಜಾತಿಗಳಾವುವು

ಈ) ರಾಜ್ಯದಲ್ಲಿ ಮೊಗವೀರ ಉಪಜಾತಿಗೆ ಸೇರಿರುವ ಜನ ಸಂಖ್ಯೆ ವಾರು ಉಪ ಜಾತಿವಾರು ಮಾಹಿತಿ ನೀಡುವುದು.